<u>ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ</u>

<u>ಸಿ.ಸಿ.ನಂ. 1085/2023</u>

ಪಿ.ಡಬ್ಲ್ಯೂ.1

ದಿನಾಂಕ 20-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀಸವಾಲುಃ ಆರೋಪಿಯ ಪರ ವಕೀಲರಿಂದಃ</u>

ನಾನು ಶಾಲೆ ಕಲಿತಿರುವುದಿಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಆರೋಪಿಯು ಅಂದಾಜು ನನಗೆ ಹಣ ನೀಡುವ ಪೂರ್ವದ ಎರಡು ವರ್ಷದಿಂದ ಪರಿಚಯ. ನಾನು ಆರೋಪಿಗೆ 2002 ರಲ್ಲಿ ಹಣ ನೀಡಿರುತ್ತೇನೆ. ನನ್ನ ಸಾಕ್ಷಿಯಲ್ಲಿ , ಫಿರ್ಯಾದಿಯಲ್ಲಿ ಮತ್ತು ನೋಟೀಸಿನಲ್ಲಿ ಆರೋಪಿಗೆ 2002 ನೇ ಇಸವಿಯಲ್ಲಿ ಹಣ ನೀಡಿರುವುದಾಗಿ ಬರೆಯಿಸಿರುತ್ತೇನೆ. ಆರೋಪಿಯು ಯಾವ ದಿನಾಂಕದಂದು ಹಣ ಪಡೆದಿರುತ್ತಾನೆ ಎಂದು ನನಗೆ ನೆನಪಿಲ್ಲ, ಆದರೆ ತೋಟಕ್ಕೆ ಬಂದು ಸದರಿ ಹಣವನ್ನು ತೆಗೆದುಕೊಂಡು ಹೋಗಿರುತ್ತಾನೆ. ನಾನು ಆರೋಪಿಗೆ ರೂ.9 ಲಕ್ಷ ಹಣವನ್ನು ನೀಡಿರುತ್ತೇನೆ. ಪ್ರಸ್ತುತ ಪ್ರಕರಣವನ್ನು ನಾನು ದಿಃ 16-02-2022 ರಂದು ರೂ.2,08,000/- ಹಣವನ್ನು ನೀಡಿರುತ್ತೇನೆ ಎಂದು ದಾಖಲು ಮಾಡಿರುತ್ತೇನೆ ಎಂದರೆ ಹೌದು. ಸದರಿ ಹಣ ಕೊಡುವ ಸಂದರ್ಭದಲ್ಲಿ ಒಂದು ಕೈಗಡಪತ್ರ ಮತ್ತು ಎರಡು ಚೆಕ್ಕನ್ನು ಬರೆಯಿಸಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಸದರಿ ಹಣವನ್ನು ನೀಡುವ ಸಂದರ್ಭದಲಿ ಒಂದು ಚೆಕ್ಕನ್ನು ರೂ.2,08,000/- ಕುರಿತು ಬರೆಯಿಸಿಕೊಂಡಿದ್ದು ನಂತರ ನಮಗೆ ಅಡಚಣೆ ಬಂದ ಕಾರಣ ಇನ್ನೊಂದು ಚೆಕ್ ರೂ.9,00,000/- ಕುರಿತು ನೀಡಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ರೂ.2,08,000/- ಹಣ ನೀಡಿದಾಗ ಒಂದು ಬಾಂಡ್ ಮತ್ತು ಸದರಿ ಹಣದ ಕುರಿತು ಒಂದು ಚೆಕ್ ಅನ್ನು ಮಾತ್ರಿ ಪಡೆದಿರುತ್ತೇನೆ ಎಂದರೆ ಹೌದು. ದಿಃ19-02-2022 ರಂದು ಒಂದು ಕೈಗಡಪತ್ರ ಮತ್ತು ಒಂದು ಚೆಕ್ಕನ್ನು ಪಡೆದಿರುತ್ತೇನೆ ಎಂದರೆ ಹೌದು. ಸದರಿ ದಿನಾಂಕದಂದು ನಾನು ಚೆಕ್ ಸಂಖ್ಯೆಃ 207537 ಮತ್ತು ಚೆಕ್ ಸಂಖ್ಯೆಃ 207538 ಎರಡು ಚೆಕ್ಕಗಳನ್ನು ಪಡೆದಿರುತ್ತೇನೆ ಎಂದರೆ ಹೌದು. ಸದರಿ ಎರಡು ಚೆಕ್ಕುಗಳಲ್ಲಿ ರೂ.9 ಲಕ್ಷ ಹಣದ ಕುರಿತು ನೀಡದ ಚೆಕ್ಕನ್ನು ಮೊದಲು ಬ್ಯಾಂಕಿನಲ್ಲಿ ನಗದೀಕರಣಕ್ಕಾಗಿ ಹಾಜರು ಮಾಡಿರುತ್ತೇನೆ. ರೂ.2,08,000/- ವ್ಯವಹಾರದ ಕುರಿತು ಚೆಕ್ ಸಂಖ್ಯೆಃ 207537 ರಲ್ಲಿನ ಚೆಕ್ಕಿನಲ್ಲಿ ರೂ.9 ಲಕ್ಷ ನಮೂದಿಸಿ ಬ್ಯಾಂಕಿಗೆ ಹಾಜರು ಮಾಡಿರುತ್ತೇನೆ ಎಂದರೆ ಹೌದು. ಸದರಿ ಚೆಕ್ಕನ್ನು ಯಾವ ದಿನಾಂಕದಂದು ನಗದೀಕರಣಕ್ಕಾಗಿ ಬ್ಯಾಂಕಿಗೆ ಹಾಜರು ಮಾಡಿರುತ್ತೇನೆ ಎಂಬುದು ನೆನಪಿಲ್ಲ. ಸದರಿ ಚೆಕ್ಕನ್ನು ಮಹಾಲಿಂಗಪುರ ಶಾಖೆಯ ಕೆನರಾ ಬ್ಯಾಂಕಿನಲ್ಲಿ ಹಾಜರು ಮಾಡಿರುತ್ತೇನೆ. ರೂ.2,08,000/- ವ್ಯವಹಾರದ ಕುರಿತು ನೀಡಿದ ಚೆಕ್ಕನ್ನು ರೂ.9 ಲಕ್ಷ ಚೆಕ್ಕನ್ನು ಹಾಜರುಮಾಡಿದ ನಂತರ ಸದರಿ ಚೆಕ್ಕನ್ನು ಬ್ಯಾಂಕಿನಲ್ಲಿ ಹಾಜರು ಮಾಡಿರುತ್ತೇನೆ. ರೂ.2,08,000/- ವ್ಯವಹಾರದ ಕುರಿತು ರೂ.9 ಲಕ್ಷ ಚೆಕ್ಕನ್ನು ದಿಃ 16-03-2023 ರಂದು ಬ್ಯಾಂಕಿನಲ್ಲಿ ನಗದೀಕರಣಕ್ಕಾಗಿ ಹಾಜರು ಮಾಡಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ಸದರಿ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದಾಗ ಆರೋಪಿಯು ತನ್ನ ಖಾತೆಯನ್ನು ಹಿಂಪಡೆದುಕೊಂಡಿರುತ್ತಾನೆ ಎಂದು ಹಿಂಬರಹ ಬಂದಿರುತ್ತದೆ.

2. ರೂ.2,08,000/- ಚೆಕ್ಕನ್ನು ಯಾವ ದಿನಾಂಕದಂದು ಬ್ಯಾಂಕಿನಲ್ಲಿ ಹಾಜರು ಮಾಡಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ಆರೋಪಿಯು ರೂ.2,08,000/- ವ್ಯವಹಾರದ ಕುರಿತು ನೀಡಿದ ಎರಡು ಚೆಕ್ಕಗಳು ಸೈದಾಪೂರಿನ ಎಕ್ಸಿಸ್ ಬ್ಯಾಂಕಿಗೆ ಸಂಬಂಧಪಟ್ಟಂತ ಚೆಕ್ಕುಗಳು ಎಂದರೆ ಸಾಕ್ಷಿಯು ಸೈದಾಪುರ ಶಾಖೆಯು ಆದರೆ ಬ್ಯಾಂಕ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಎರಡು ಚೆಕ್ಕುಗಳು ಅನುಕ್ರಮವಾಗಿ ಇರುತ್ತದೆ ಎಂದರೆ ಹೌದು. ರೂ.2,08,000/- ವ್ಯವಹಾರಕ್ಕೆ ನೀಡಿದ ಚೆಕ್ಕನ್ನು ಚೆಕ್ ಸಂಖ್ಯೆಃ 207538 ಅನ್ನು ರೂ.9 ಲಕ್ಷಕ್ಕೆ ಮೊದಲು ಹಾಜರು ಮಾಡಿರುತ್ತೇನೆ ಎಂದರೆ ಹೌದು. ನಂತರ ಆರೋಪಿ ನೀಡಿದ ಸಹಿ

ಮಾಡಿದ ಖಾಲಿ ಚೆಕ್ಕನ್ನು ದಿಃ 17-05-2023 ರಂದು ನಮೂದಿಸಿ ಸದರಿ ಖಾಲಿ ಚೆಕ್ಕನ್ನು ಬ್ಯಾಂಕಿಗೆ ಹಾಜರು ಮಾಡಿರುತ್ತೇನೆ ಎಂದರೆ ಹೌದು. ರೂ.2,08,000/- ವ್ಯವಹಾರಕ್ಕೆ ಆರೋಪಿಯು ಒಂದು ಕೈಗಡಪತ್ರ ಮತ್ತು ಎರಡು ಚೆಕ್ಕುಗಳನ್ನು ನೀಡಿದ್ದನು ಎಂದರೆ ಹೌದು. ನಾನು ರೂ.2,08,000/- ಅನ್ನು ನಗದು ರೂಪವಾಗಿ ಆರೋಪಿಗೆ ನೀಡಿರುತ್ತೇನೆ. ಸದರಿ ಹಣವನ್ನು ನಾನು ಆರೋಪಿಗೆ ನೀಡಿದ ನಂತರ , ಆರೋಪಿಯು ಹಣವನ್ನು ಪಡೆದ ಎರಡು ತಿಂಗಳಾದ ಹಣವನ್ನು ಮರಳಿ ಕೊಟ್ಟಿದ್ದರು ಸಹ ಸದರಿ ಕೈಗಡಪತ್ರ ಮತ್ತು ಎರಡು ಚೆಕ್ಕುಗಳನ್ನು ನಾನು ಆರೋಪಿಗೆ ಹಿಂತಿರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯು ನನಗೆ ಯಾವುದೇ ಹಣ ವಾಪಸ್ಸು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಸಾಕಷ್ಟು ಸಲ ಸದರಿ ಕೈಗಡಪತ್ರ ಮತ್ತು ಎರಡು ಚೆಕ್ಕುಗಳನ್ನು ವಾಪಸ್ಸು ಕೇಳಿದರು ಸಹ ನಾನು ಸದರಿಯವುಗಳನ್ನು ಅಲ್ಲಿ ಇಟ್ಟಿದ್ದೇನೆ ಎಂದು ಹೇಳಿ ಸದರಿಯವುಗಳನ್ನು ವಾಪಸ್ಸು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ರೂ.2,08,000/- ಮರಳಿ ನನಗೆ ಕೊಟ್ಟಿದ್ದರು ಸಹ ನಾನು ದುರಾಸೆಯಿಂದ ಸದರಿ ಎರಡು ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ಮತ್ತು ಇನ್ನೊಂದು ಪ್ರಕರದಲ್ಲಿ ಆರೋಪಿಯು ದಿಃ 20-06-2023 ರಂದು ರೂ.2,08,000/- ಹಣವನ್ನು ನನಗೆ ಮರಳಿ ಕೊಟ್ಟಿರುವುದಾಗಿ ನಾನು ನೀಡಿದ ನೋಟೀಸಿಗೆ ಪ್ರತ್ಯುತ್ತರವನ್ನು ನೀಡಿರುತ್ತಾನೆ ಎಂದರೆ ಸರಿಯಲ್ಲ. ನನಗೆ ಆರೋಪಿಯ ಸಹಿಯನ್ನು ಗುರುತಿಸಲು ಆಗುವುದಿಲ್ಲ , ಕಾರಣ ನಾನು ಶಾಲೆಯನ್ನು ಕಲಿತಿರುವುದಿಲ್ಲ. ಪ್ರಸ್ತುತ ಪ್ರಕರಣದ ಪಿರ್ಯಾದಿ ವಿಷಯಗಳ ಸಂಪೂರ್ಣ ಮಾಹಿತಿ ನನಗೆ ಇಲ್ಲ ಎಂದರೆ ಸಾಕ್ಷಿಯು ನಾನು ಆರೋಪಿಗೆ ಹಣ ನೀಡಿದ್ದನ್ನು ಹೊರತುಪಡಿಸಿ ನನಗೆ ಏನು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕೈಗಡಪತ್ರಕ್ಕೆ ಸಹಿ ಮಾಡಿದ ಸಾಕ್ಷಿಗಾರನಾದ ಪರಪ್ಪ ಯಲ್ಲಪ್ಪ ಬ್ಯಾಕೋಡ ನನ್ನ ಪಕ್ಕದ ಮನೆಯವರು. ನನಗೆ ಪ್ರಕರಣದ ಕುರಿತು ಏನೂ ಗೊತ್ತು ಇರದೇ ಇದ್ದರು ಜನರ ಮಾತುಕೇಳಿಕೊಂಡು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ನೀಡಿದ ನಿಪಿ-1 ಮತ್ತು 7 ಹಾಗೂ ಸಿಸಿ. 613/2023 ರಲ್ಲಿ ನೀಡಿದ ಚೆಕ್ಕು ರೂ.2,08,000/-ಕ್ಕೆ ನೀಡುವ ಸಂದರ್ಭದಲ್ಲಿ ಸದರಿ ಎರಡು ಚೆಕ್ಕುಗಳನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಮೊತ್ತವನ್ನು ನೀಡುವ ಸಮಯದಲ್ಲಿ ಕೇವಲ ಕೈಗಡಪತ್ರ ಮತ್ತು ರೂ.2,08,000/- ಚೆಕ್ಕನ್ನು ಮಾತ್ರ ನೀಡಿದ್ದು ನಂತರ ನನಗೆ ಹಣದ ಅವಶ್ಯಕತೆ ಇರುವುದರಿಂದ ಇನ್ನೊಂದು ಚೆಕ್ಕನ್ನು ಆರೋಪಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತನು ನೀಡಿದ ರೂ.9 ಲಕ್ಷ ಚೆಕ್ಕಿನ ಕುರಿತು ಯಾವುದೇ ಕೈಗಡಪತ್ರವನ್ನು ಮಾಡಿಕೊಂಡಿರುವುದಿಲ್ಲ. ಆರೋಪಿಯು ರೂ.2,08,000/- ಚೆಕ್ಕನ್ನು ನೀಡಿದ ನಂತರ ನನ್ನಿಂದ ರೂ.9 ಲಕ್ಷ ರೂಪಾಯಿಯನ್ನು ಪಡೆದಿರುತ್ತಾನೆ. ಸದರಿ ರೂ.9 ಲಕ್ಷ ಹಣದ ವ್ಯವಹಾರದ ಕುರಿತು ಸುಳ್ಳು ಚೆಕ್ಕನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ರೂ.9 ಲಕ್ಷ ದ ವ್ಯವಹಾರದ ಕುರಿತು ಚೆಕ್ ಪ್ರಕರಣವನ್ನು ರೂ.2,08,000/-ಕುರಿತು ಪ್ರಕರಣ ಹೂಡುವ ಪೂರ್ವದಲ್ಲಿ ಮಾಡಿರುತ್ತೇನೆ ಎಂದರೆ ಹೌದು. ಸದರಿ ರೂ.9 ಲಕ್ಷದ ವ್ಯವಹಾರದ ಕುರಿತು ದಾಖಲಿಸಿದ ಪ್ರಕರಣದಲ್ಲಿ ಪಿರ್ಯಾದಿಯಲ್ಲಾಗಲೀ ಅಥವಾ ನೋಟೀಸ್ಸಿನಲ್ಲಾಗಲೀ ರೂ.2,08,000/- ವ್ಯವಹಾರದ ಕುರಿತು ನಮೂದು ಮಾಡಿರುವುದಿಲ್ಲ. ಆರೋಪಿಯು ರೂ.2,08,000/- ವ್ಯವಹಾರದ ಕುರಿತು ಎರಡು ಚೆಕ್ಕುಗಳನ್ನು ಕೊಟ್ಟಿರಲಿಲ್ಲ , ಕೇವಲ ಒಂದೇ ಚೆಕ್ ನೀಡಿದ್ದನು ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ.